**<u>IN THE COURT OF THE SENIOR CIVIL JUDGE AND JMFC, TIPTUR.</u>**

**MVC No. 684/2024**

**PW-1**

**<u>Oath is administered to the witness on 10.09.2025</u>**

**<u>Cross Examination by: Sri. AMV Counsel for Respondent</u>**

ಅಪಘಾತ ಆಗಿದೆ ಎಂದು ಹೇಳಿದ್ದು ಆ ದಿನ ನಾನು ಸರ್ಕಾರಿ ಬಸ್ ನಿಂದ ಕೆ.ಬಿ ಕ್ರಾಸ್ ನಲ್ಲಿ ಇಳಿದು ಹಟ್ನ ಗ್ರಾಮಕ್ಕೆ ನನ್ನ ಮನೆಗೆ ನಡೆದುಕೊಂಡು ಹೋಗುತ್ತಿದ್ದೆ. ಆಗ ಸುಮಾರು ರಾತ್ರಿ 8-30 ಗಂಟೆ ಆಗಿದ್ದ ಕಾರಣ ಕತ್ತಲಾಗಿತ್ತು ಎಂದರೆ ನಿಜ. ನಾನು ಹೋಗುತ್ತಿದ್ದ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಆಗಿತ್ತು ಎಂದರೆ ನಿಜ. ಆ ರಸ್ತೆಯಲ್ಲಿ ತಿಪಟೂರಿನಿಂದ ತುರುವೇಕೆರೆಯಿಂದ ಬೆಂಗಳೂರು ಕಡೆಯಿಂದ ಹೊಸದುರ್ಗ ಮತ್ತು ಚಿಕ್ಕನಾಯಕನಹಳ್ಳಿ ಕಡೆ ಹೋಗುವ ಸಾಕಷ್ಟು ಬಸ್ ಗಳು ಮತ್ತು ಲಾರಿಗಳು ಓಡಾಡುತ್ತವೆ ಎಂದರೆ ನಿಜ. ನಾನು ಆ ದಿನ ಮೊಬೈಲ್ ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಇದ್ದರು ಎಂದು ಹೇಳಿದ್ದು ರಸ್ತೆಯ ಬಲಭಾಗದಲ್ಲಿ ನನ್ನ ಅಜ್ಜಿ ನಿಂತಿದ್ದರು. ನಾನು ನನ್ನ ಅಜ್ಜಿಯನ್ನು ನೋಡಿದ ತಕ್ಷಣ ರಸ್ತೆಯಲ್ಲಿ ಬರುತ್ತಿದ್ದ ವಾಹನಗಳನ್ನು ಗಮನಿಸದೆ ರಸ್ತೆಯ ಎಡಭಾಗದಿಂದ ಬಲಭಾಗಕ್ಕೆ ದಾಟುತ್ತಿದ್ದೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನ ಸಂಖ್ಯೆ ಕೆಎ-50-ಇಎಂ-6467 ಚಾಲಕ ನಿಧಾನವಾಗಿ ಲೈಟ್ ಹಾಕಿಕೊಂಡು ಚಾಲನೆ ಮಾಡಿಕೊಂಡು ಬರುತ್ತಿದ್ದ ಮತ್ತು ನಾನು ಒಮ್ಮೆಲೆ ರಸ್ತೆ ದಾಟಲು ಹೋಗಿದ್ದರಿಂದ ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಚಾಲಕನ ಯಾವುದೇ ತಪ್ಪು ಇರಲಿಲ್ಲ ಮತ್ತು ಆತ ನಿಧಾನವಾಗಿ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ನಾನೇ ರಸ್ತೆಯ ಮೇಲೆ ಸ್ವತಃ ಬಿದ್ದು ಗಾಯಗೊಂಡಿದ್ದು ಊರಿನವರು ಮತ್ತು ನಾನು ಸೇರಿಕೊಂಡು ದ್ವಿಚಕ್ರ ವಾಹನ

ಚಾಲಕನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಸ್ವತಃ ಬಿದ್ದು ಗಾಯಗೊಂಡಿದ್ದೇನೆ ಮತ್ತು ಬೈಕ್ ಚಾಲಕನ ತಪ್ಪಿನಿಂದ ಯಾವುದೇ ಗಾಯ ನನಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ ತೋರಿಸಲು ನನ್ನ ಶಾಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಅಪಘಾತವಾದಾಗ ನನ್ನನ್ನು ಚಿಕ್ಕನಾಯಕನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿಂದ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಅಲ್ಲಿಯೂ ಸಹ ಆಗುವುದಿಲ್ಲ ಎಂದು ಹೇಳಿದ್ದರಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕ್ಕನಾಯಕನಹಳ್ಳಿಯ ಮತ್ತು ತುಮಕೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ನಾನು ಹೇಳಿಕೆ ನೀಡಿದ್ದೇನೆ. ಅಲ್ಲಿ ನಾನು ತೋರಿಸಿದ ಬಗ್ಗೆ ದಾಖಲೆ ಕೊಟ್ಟಿಲ್ಲ ಸಾಕ್ಷಿಯು ಅಲ್ಲಿ ಯಾವುದೇ ಚಿಕಿತ್ಸೆ ಪಡೆಯದೇ ಇದ್ದ ಕಾರಣ ದಾಖಲೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾನು ಅಲ್ಲಿ ಅಪಘಾತ ಆಗಿದೆ ಎಂದು ಸುಳ್ಳು ಹೇಳಿದ್ದರಿಂದ ನನಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಮೂಳೆ ಮುರಿತವಾಗಿರಲಿಲ್ಲ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಸದರಿ ಆಸ್ಪತ್ರೆಯಲ್ಲಿ ನಾನು 24 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಅಲ್ಲಿ ಆ ರೀತಿ ಒಳರೋಗಿಯಾ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ರಾಡ್ ಹಾಕಿಲ್ಲ ಮತ್ತು ಆಪರೇಷನ್ ಮಾಡಿಲ್ಲ ಎಂದರೆ ಸರಿಯಲ್ಲ. ಅದು ಸರ್ಕಾರಿ ಆಸ್ಪತ್ರೆ ಎಂದರೆ ನಿಜ. ಅಲ್ಲಿ ಚಿಕಿತ್ಸೆ ಉಚಿತವಾಗಿ ನೀಡಲಾಗುತ್ತದೆ ಎಂದರೆ ಸರಿಯಲ್ಲ. ನಾನು ಉಚಿತವಾಗಿ ಚಿಕಿತ್ಸೆ ಪಡೆದರೂ ಸಹ ಸುಳ್ಳು ಬಿಲ್ ಗಳನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಚಿಕಿತ್ಸೆಗೆ ಸುಮಾರು 30 ಲಕ್ಷ ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಂದುವರಿದ ಚಿಕಿತ್ಸೆ

ಪಡೆಯುುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮೂಳೆಮುರಿತವಾಗಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನ ಹಾಗೆ ಕೆಲಸ ಮಾಡಿಕೊಂಡು ಚೆನ್ನಾಗಿದ್ದೇನೆ ಮತ್ತು ನನಗೆ ಯಾವುದೇ ಅಂಗನ್ಯೂನತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ಹಣ ಖರ್ಚು ಮಾಡಿಲ್ಲ ಮತ್ತು ನಾನು ವೈದ್ಯಕೀಯ ಬಿಲ್ ಗಳನ್ನು ಮತ್ತು ಔಷಧಿ ಸಲಹಾ ಚೀಟಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಬಾಟಾ ಶೋ ರೂಮ್ ನಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ವ್ಯವಸಾಯ ಹಾಗೂ ಹೈನುಗಾರಿಕೆ ಸಹ ಮಾಡುತ್ತಿದ್ದೆ ಮತ್ತು ನನ್ನ ತಿಂಗಳ ಆದಾಯ 50 ಸಾವಿರ ಎಂದು ಹೇಳಿದ್ದು ಆ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನ್ನ ತಿಂಗಳ ಆದಾಯ 50 ಸಾವಿರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆ ಸಮಯದಲ್ಲಿ ನಾನು ಸಹಾಯಕರಿಗೆ ನೇಮಕ ಮಾಡಿಕೊಂಡಿದ್ದೆ ಮತ್ತು ಅವರಿಗೆ ತಿಂಗಳಿಗೆ 25 ಸಾವಿರ ರೂ. ಹಣ ಕೊಡುತ್ತಿದ್ದೆ ಎಂದು ಹೇಳಿದ್ದು ಆ ಬಗ್ಗೆದಾಖಲೆ ಕೊಟ್ಟಿಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರ ಚಾಲಕನ ತಪ್ಪಿನಿಂದ ಅಪಘಾತ ಆಗದೇ ಇದ್ದರೂ ಸಹ ಪೋಲೀಸರ ಜೊತೆ 1 ನೇ ಎದುರುದಾರನ ಜೊತೆ ಶಾಮಿಲಾಗಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವತಃ ಬಿದ್ದು ಗಾಯಗೊಂಡಿದ್ದರಿಂದ ಎದುರುದಾರ ಕಂಪನಿಯು ಪರಿಹಾರ ಕೊಡಬಲು ಭಾದ್ಯ ಆಗುವುದಿಲ್ಲ ಎಂದರೆ ಸರಿಯಲ್ಲ.

**Re-Examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR